**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**–6/2022 **ಪಿ ಡಬ್ಲ್ಯೂಃ –1**

**ದಿಃ 07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ ಎಸ ಅಂಗಡಿ ರವರಿಂದಃ**

ಸದರಿ ದಾವಾವನ್ನು ಯಾವ ಕಾರಣಕ್ಕೆ ಯಾರ ಮೇಲೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ನನ್ನ ಮನೆಯವರು ಮರಣ ಹೊಂದಿದ ನಂತರ ನಮಗೆ ಯಾವುದೇ ಆಸರೆ ಇಲ್ಲದ ಕಾರಣ ನನ್ನ ಮನೆಯವರಿಗೆ ಬರುವಂತಹ ಆಸ್ತಿ ಕೇಳಿ ದಾವಾ ಹಾಕಿರುತ್ತೇನೆ. ಸದರಿ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸದರಿ ದಾವಾದಲ್ಲಿರುವ ಮಾಹಿತಿ ನನಗೆ ಸಂಪೂರ್ಣವಾಗಿ ಇದೆ ಎಂದರೆ ಸರಿ. ಶರಣ ಬ್ಯಾಳಿ ಎಂದರೆ ನನ್ನ ಯಜಮಾನರು. ಶರಣ ಇವರ ಜೊತೆ ನನ್ನ ಮದುವೆ ದಿಃ21–05–1998 ರಲ್ಲಿ ಜರುಗಿರುತ್ತದೆ. ನಮ್ಮ ಮದುವೆಯನ್ನು ಶರಣ ಅವರ ತಂದೆ ಮಾಡಿದರು ಎಂದರೆ ಸಾಕ್ಷಿ ಎಲ್ಲರು ಸೇರಿ ಮಾಡಿರುತ್ತಾರೆ ನಮ್ಮ ಮನೆಯವರು ಸೇರಿದ್ದರು ಎಂದು ನುಡಿಯುತ್ತಾರೆ. ನನ್ನ ಯಜಮಾನರು ದಿಃ30–01–1973 ರಲ್ಲಿ ಜನಿಸಿರುತ್ತಾರೆ. ನನ್ನ ಯಜುಮಾನರು ಬಿ.ಕಾಂ ಪದವಿಧರರಾಗಿದ್ದರು. ಸದರಿಯವರು ಮದುವೆಯಾದ ನಂತರ ಹಲಗಪ್ಪ ಯುನಿವರ್ಸಿಟಿಯಲ್ಲಿ ಬಿ.ಕಾಂ ಮುಗಿಸಿದ್ದರು. ಹಲಗಪ್ಪ ಯುನಿವರ್ಸಿಟಿ ಎಂದರೆ ಓಪನ್ ಯುನಿವರ್ಸಿಟಿ ಎಂದರೆ ಸರಿ. ಸದರಿಯವರು ಅಂದರೆ ನನ್ನ ಯಜುಮಾನರು ಕಾಲೇಜಿಗೆ ಹೋಗಿ ಪದವಿ ಕಂಪ್ಲಿಟ್ ಮಾಡಿಲ್ಲ ಎಂದರೆ ಸರಿ. ಎಸಎಸಎಲ್ ಸಿ ಹಾಗೂ ಪಿಯುಸಿ ವಿದ್ಯಾಭ್ಯಾಸ ಯಾವಾಗ ಆಯಿತು ಎಂದರೆ ಸಾಕ್ಷಿ ಹುಬ್ಬಳ್ಳಿಯಲ್ಲಿಯೆ ಆಗಿದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಮದುವೆಯ ಮುಂಚೆ ಆಗಿತ್ತು ಎನ್ನುತ್ತಾರೆ. ಜೆ ಜೆ ಕಾರ್ಮಸ್ ಕಾಲೇಜನಲ್ಲಿ ಅವರು ಕೆಲಸ ಮಾಡುತ್ತಿದ್ದರು. ಅವರ ಎಸಎಸಎಲ್ ಸಿ ಮತ್ತು ಪಿಯುಸಿ ಯಾವಾಗ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ

ಎನ್ನುತ್ತಾರೆ. ನನ್ನ ಮದುವೆ ಸಮಯಕ್ಕೆ ಅವರು ಮಾರ್ಕೆಟಿಂಗ್ ಏಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದರು. ಬಾಗಿ ಆಟ್ಕೋ ದಲ್ಲಿ ಕೆಲಸ ಮಾಡುತ್ತಿದ್ದರು. ಎಸಎಸಎಲ್ ಸಿ ಹಾಗೂ ಪಿಯುಸಿ ವಿದ್ಯಾಭ್ಯಾಸದ ಆಧಾರದ ಮೇಲೆ ಅವರು ನೌಕರಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಬಾಗಿ ಆಟ್ಕೋದಲ್ಲಿ ಅವರಿಗೆ ಎನು ಸಂಬಳ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎಸಎಸಎಲ್ ಸಿ ಹಾಗೂ ಪಿಯುಸಿ ಆಧಾರದ ಮೇಲೆ ಕೆಲಸ ಮಾಡಲು ಹೋದರೆ ಕಮ್ಮಿ ಸಂಬಳ ಇರುತ್ತದೆ ಎಂದರೆ ಸಾಕ್ಷಿ ಮಾರ್ಕೆಟಿಂಗನಲ್ಲಿ ಆ ರೀತಿ ಇರುವುದಿಲ್ಲ ಎನ್ನುತ್ತಾರೆ. ಅವರಿಗೆ ಅಂದರೆ ಎಂಬಿಎ ಆದವರಿಗೆ ಹಾಗೂ ಎಸಎಸಎಲ್ ಸಿ ಯವರಿಗೆ ಒಂದೆ ಸಂಬಳ ಇರುತ್ತದೆ ಎನ್ನುತ್ತೀರಾ ಎಂದರೆ ಸಾಕ್ಷಿ ಹೌದು ಏಕೆಂದರೆ ಮಾರ್ಕೆಟಿಂಗನಲ್ಲಿ ಅವರು ಶಿಕ್ಷಣ ನೋಡುವುದಿಲ್ಲ ಕೇವಲ ಸೇಲ್ಸ ನೋಡುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಗಂಡನಿಗೆ ಕಮ್ಮಿ ಸಂಬಳ ಇದ್ದರು ಕೂಡಾ ನಾನು ಸ್ಯಾಲರಿ ಜಾಸ್ತಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಗಂಡನ ಡಿಗ್ರಿ ಮುಗಿಯುವಷ್ಟರಲ್ಲಿ 2 ನೇ ವಾದಿ ಜನಿಸಿದ್ದಳು. 2 ನೇ ವಾದಿಯು ದಿಃ29-06-2000 ರಂದು ಜನ್ಮ ಹೊಂದಿರುತ್ತಾರೆ. 3 ನೇ ವಾದಿ ಯಾವಾಗ ಜನಿಸಿದ್ದರು ಎಂದರೆ ಸಾಕ್ಷಿ ದಿಃ17-12-2006 ಎಂದು ನುಡಿಯುತ್ತಾರೆ. ನನ್ನ ಮನೆಯವರ ಡಿಗ್ರಿ 2010 ಕ್ಕೆ ಮುಗಿದಿದೆ ಎಂದರೆ ಸಾಕ್ಷಿ ಸರಿ ಎನ್ನುತ್ತಾರೆ. ನನ್ನ ಗಂಡನಿಗೆ ಶಿಕ್ಷಣ ಕಮ್ಮಿ ಇದ್ದ ಕಾರಣ ಅವರ ತಂದೆ ಅವರ ಪ್ರಭಾವ ಉಪಯೋಗಿಸಿ ಕೆಲಸ ಕೊಡಿಸಿದ್ದರು ಎಂದರೆ ಸಾಕ್ಷಿ ಹಾಗೇನು ಇಲ್ಲ ಎನ್ನುತ್ತಾರೆ. ಸದರಿಯವರು ನನ್ನ ಮದುವೆಗಿಂತ ಮೊದಲು ಬಾಗಿ ಆಟ್ಕೊದಲ್ಲಿ ಕೆಲಸ ಮಾಡುತ್ತಿದ್ದರು ಆ ನಂತರ ವಿ.ಆರ.ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಮನೆಯವರು ಪದೇ ಪದೇ ಕೆಲಸ ಬಿಟ್ಟು ಬರುತ್ತಿದ್ದರು ಹಾಗಾಗಿ ಅವರ ತಂದೆ ಸುಮಾರು 4-5 ಕಡೆ ಅವರಿಗೆ ಕೆಲಸ ಕೊಡಿಸಿದ್ದರು ಎಂದರೆ ಸರಿಯಲ್ಲ, ಅವರು ಒಂದೆ ಕಂಪನಿಯಲ್ಲಿ ಕೆಲಸ ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ವಿ.ಆರ.ಎಲ್ ನಲ್ಲಿ ಅವರ ಹುದ್ದೆ ಕ್ಲರ್ಕ ಎಂಬುವುದಾಗಿ ಇತ್ತು. ವಿ.ಆರ.ಎಲ್ ನಲ್ಲಿ ನನ್ನ ಗಂಡ ಕೆಲಸ ಮಾಡಿದ್ದು ಅವರ ಕೊನೆಯ ವೇತನ ಎನು ಇತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ.

ದಾವಾದಲ್ಲಿ ನಾನು ಆಸ್ತಿ ಸೇರಿಸಿದ್ದು ಅವು ಯಾವವು ಎಂದರೆ ಇಡಬ್ಲ್ಯೂಎಸ 109, ತೇಜಸ್ವಿ ನಗರದಲ್ಲಿರುವ ಮನೆ, 262 ಸೈಟ, ಮುಂಬಯಿನಲ್ಲಿ 2 ಮನೆಗಳಿದ್ದು ಅದರ ಡಿಟೆಲ್ಸ ನನಗೆ ಗೊತ್ತಿಲ್ಲ. ಸಧ್ಯಕ್ಕೆ ದಾವಾದಲ್ಲಿ ನಾನು ಮೂರು ಆಸ್ತಿಗಳ ಬಗ್ಗೆ ಪರಿಹಾರ ಕೇಳಿದ್ದೇನೆಂದರೆ ಸರಿ. ಸದರಿ ಆಸ್ತಿಗಳು ಈಗ ಯಾರ ಹೆಸರಿನಲ್ಲಿವೆ ಎಂದು ಗೊತ್ತಿದೇಯಾ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ಲಾಟ ನಂಬರ 261 ಇದು ಈಗ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಅದನ್ನು ದಾವಾದಲ್ಲಿ ನಾನು ಸೇರಿಸಿಲ್ಲವೆಂದರೆ ಸರಿ. ಇಡಬ್ಲ್ಯೂಎಸ 109 ಆಸ್ತಿಯನ್ನು ನನ್ನ ಮಾವನವರು ಯಾವಾಗ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ 1991 ರಲ್ಲಿ ಎನ್ನುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ದಿಃ19-02-1985 ರ ನೊಂದಣಿ ಖರೀದಿ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇಡಬ್ಲ್ಯೂಎಸ 109 ಆಸ್ತಿಯ ಖರೀದಿ ಪತ್ರ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 1 ಎಂದು ಗುರ್ತಿಸಲಾಯಿತು. ಗ್ರೌಂಡ ಪ್ಲೋರ ಆಸ್ತಿಯನ್ನು 1986 ರಲ್ಲಿ ನನ್ನ ಮಾವ ತಮ್ಮ ಇಲಾಖೆಯಿಂದ ಸಾಲ ಪಡೆದು ಮನೆ ಕಟ್ಟಿಸಿದ್ದರು ಎಂದು ಸಾಕ್ಷಿಗೆ House building advances form No.5 ಎಂಬ ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಡಿ 2 ಎಂದು ಗುರ್ತಿಸಲಾಯಿತು. ನಿಶಾನೆ ಡಿ 2 ರ ಪ್ರಕಾರ ನನ್ನ ಮಾವ ರೂ.70,000/- ಅಡವಾನ್ಸ ತೆಗೆದುಕೊಂಡಿದ್ದರು ಎಂದರೆ ಸರಿ. ಸದರಿ ಸಾಲವನ್ನು

93 instalment ಗಳಲ್ಲಿ ತಿರಿಸಿರುತ್ತಾರೆಂದರೆ ಅದು ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಕಟ್ಟಿಸುವ ಸಮಯದಲ್ಲಿ ನನ್ನ ಯಜುಮಾನರಿಗೆ 12 ವರ್ಷ ವಯಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಇಡಬ್ಲ್ಯೂಎಸ 109 ರ ಮೊದಲ ಅಂತಸ್ತಿನಲ್ಲಿ ಮನೆಯನ್ನು ನನ್ನ ಮಾವ ನಿವೃತ್ತಿ ಹೊಂದಿದ ನಂತರ ನಿವೃತ್ತಿ ಸೌಲಭ್ಯ ಪಡೆದು ಕಟ್ಟಿಸಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ01-01-2005 ರಂದು ಸದರಿ ಮನೆಯನ್ನು ನನಗೆ ಮತ್ತು ನನ್ನ ಯಜುಮಾನರಿಗೆ ಕೇವಲ ಉಪಯೋಗಿಸಲು ಮಾತ್ರ ಕೊಟ್ಟಿದ್ದರು ಎಂದರೆ ಸಾಕ್ಷಿ ಹಾಗೇನು ಇಲ್ಲ ನಾವು ಅಲ್ಲಿಯೇ ಇರುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ದಿಃ01-01-2005 ರಂದು ಆಗಿದೆ ಎಂದು ಹೇಳಲಾದ ಕರಾರು ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿಃ02-01-2005 ರಂದು ಈ ದಾಖಲೆ ಪ್ರಕಾರ ನನ್ನ ಯಜುಮಾನರು ಮನೆಯನ್ನು ಸುಸ್ಥಿತಿಯಲ್ಲಿ

ಇಡುವ ಬಗ್ಗೆ ಅವರ ತಂದೆಯಿಂದ ರೂ.650 ಹಣದ ಸಾಲವನ್ನು ಪಡೆದಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ01-01-2005 ಹಾಗೂ ದಿಃ02-01-2005 ರಂದು ಆದ ದಾಖಲೆಗಳ ಪ್ರಕಾರ ಸದರಿ ಮನೆಯನ್ನು ನಮಗೆ ಇರಲು ಮಾತ್ರ ಕೊಟ್ಟಿದ್ದು ಹಾಗೂ ಮನೆಯನ್ನು ಸುಸ್ಥಿತಿಯಲ್ಲಿ ಇಡುವುದಕ್ಕೆ ನನ್ನ ಗಂಡ ಅವರ ತಂದೆಯಿಂದ ರೂ.650 ಹಣವನ್ನು ತೆಗೆದುಕೊಂಡಿದ್ದರು ಆದರು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಇಡಬ್ಲ್ಯೂಎಸ 109 ಈ ಮನೆಯನ್ನು ನನ್ನ ಮಾವ ಹಾಗೂ ಅವರ ತಮ್ಮ ಸ್ವತಃವಾಗಿ ಖರೀದಿ ಹಿಡಿದಿದ್ದು ನನಗೆ ಗೊತ್ತಿದ್ದರು ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಎ 2 ರ ಆಸ್ತಿಯನ್ನು ಯಾರು, ಯಾವಾಗ ಖರೀದಿ ಹಿಡಿದರು ಎಂಬ ಬಗ್ಗೆ ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ನನ್ನ ಮಾವ ತನ್ನ ಸ್ವತಃ ಸಂಪಾದನೆಯಿಂದ ಖರೀದಿ ಹಿಡಿದಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ನಿಶಾನೆ ಪಿ 9 ನ್ನು ತೋರಿಸಿ ಈ ವಿಲ್ ನ್ನು ನೀವು ಹಾಜರು ಮಾಡಿದ್ದೀರಿ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ನಾನು ಹಾಜರು ಮಾಡಿಲ್ಲ ಎನ್ನುತ್ತಾರೆ. ನಿಶಾನೆ ಪಿ 9 ರಲ್ಲಿ ದಾವಾ ಆಸ್ತಿಗಳು ನನ್ನ ಸ್ವತಃ ಆಸ್ತಿಗಳೆಂದು ನನ್ನ ಮಾವನವರು ಬರೆದಿರುತ್ತಾರೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಶಾನೆ ಪಿ 9 ರಲ್ಲಿ ಸದರಿ ಆಸ್ತಿಗಳು ಅವರ ಸ್ವತಃ ಆಸ್ತಿಗಳೆಂದು ಕಾಣಿಸಿದ್ದರು ಕೂಡಾ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ಲಾಟ ನಂಬರ 262 ವಿವೇಕಾನಂದ ನಗರ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಪ್ರಾ ಲಿಮಿಟೆಡ್ ಇವರ ಕಡೆಯಿಂದ ನನ್ನ ಮಾವನವರಿಗೆ ಮಂಜೂರಾಗಿತ್ತು ಎಂದರೆ ಅದು ನನ್ನ ಮನೆಯವರಿಗೆ ಗಿಫ್ಟ ಅಂತಾ ಬಂದಿರುವುದು ಮಾತ್ರ ನನಗೆ ಗೊತ್ತಿದೆ ಎನ್ನುತ್ತಾರೆ. ಗಿಫ್ಟ ಮೂಲಕ ನನ್ನ ಮನೆಯವರಿಗೆ ಪ್ಲಾಟ ನಂಬರ 261 ಬಂದಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಪ್ಲಾಟ ನಂಬರ 262 ನ್ನು ವಿವೇಕಾನಂದ ನಗರ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಪ್ರಾ ಲಿಮಿಟೆಡ್ ನಿಂದ ನನ್ನ ಮಾವ ರೂ.3,400/- ಗಳನ್ನು ಕೊಟ್ಟು ಖರೀದಿ ಹಿಡಿದರು ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ಖರೀದಿ ಹಿಡಿಯುವ ಸಮಯದಲ್ಲಿ ನನ್ನ ಗಂಡನ ವಯಸ್ಸು 18 ಇತ್ತು ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ